## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್ 73/2019

ಡಿ ಡಬ್ಲ್ಯೂ-1

**ದಿನಾಂಕ 31-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಎಲ್. ವಿ.ಆರ್. ವಾದಿ ಪರ ವಕೀಲರುಃ**

ನನ್ನ ತಂದೆಯ ಹೆಸರು ಲೇಟ್ ಎಸ್. ಶಂಕರರಾವ್. ನಮ್ಮ ತಂದೆಯವರನ್ನು ಪೋಸ್ಟಮಾಸ್ಟರ್ ಎಸ್ ಶಂಕರ್ ರಾವ್ ಎಂದು ಸಹ ಕರೆಯುತ್ತಿದ್ದರು. ನಮ್ಮ ತಾತನ ಹೆಸರು ರಿಟೈರ್ಡ ಪೋಸ್ಟಮಾಸ್ಟರ್ ಸುಬ್ಬರಾವ್ ಎಂದರೆ ಸರಿ. ಈ ದಾವೆಯನ್ನು ವಾದಿ ಶಂಕರ ರಾವ್ ರವರ ಸಲ್ಲಿಸಿದ್ದಾರೆ ಎಂದರೆ ಸರಿ. ಸರ್ವೇ ನಂಬರ 62 ಮತ್ತು 63 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ದಿಃ 16-05-1966 ರಲ್ಲಿ ನಮ್ಮ ತಂದೆ ಲೇಟ್ ಎಸ್ ಶಂಕರ ರಾವ್ ರವರು ವಾದಿಯ ತಂದೆ ಮೃತ ಬಾಪುಜಿರಾವ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

2. ನಿಪಿ-1 ರಲ್ಲಿರುವ ಸಹಿ ನಮ್ಮ ತಂದೆಯದೇ ಆಗಿರುತ್ತದೆ. ಸರ್ವೇ ನಂಬರ 62, 63 ಮತ್ತು 64 ಒಟ್ಟು ವಿಸ್ತೀರ್ಣ 7 ಎಕರೆ 16 ಗುಂಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಎಸ್. ಶಂಕರರಾವ್ ರವರು ಖರೀದಿಮಾಡಿರುವ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

3. ನಮ್ಮ ತಂದೆ ನಿಡಿ-1 ರಂತೆ 2 ಎಕರೆ 20 ಗುಂಟೆ ಜಮೀನನ್ನು ರಾಜೋಜಿರಾವ್ ರವರ ಮಗ ಸಿದ್ದೋಜಿರಾವ್ ರವರ ಕಡೆಯಿಂದ ದಿಃ 30-09-1958 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ನಮ್ಮ ತಂದೆ ದಿಃ 29-08-1960 ರಲ್ಲಿ ಸರ್ವೇ ನಂಬರ 63 ಮತ್ತು 64 ರಲ್ಲಿ 2 ಎಕರೆ ಜಮೀನನ್ನು ರಾಜೋಜಿರಾವ್ ಮಗ ಸಿದ್ದೋಜಿರಾವ್ ರವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ.

**4**. ನಿಡಿ-1 ರಲ್ಲಿ ಬಂದಿರುವ ಆಸ್ತಿಯನ್ನು ನಿಪಿ-2 ರ ಕ್ರಯಪತ್ರದ ಮುಖಾಂತರ ನಮ್ಮ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಿಪಿ-2 ಮತ್ತು ನಿಡಿ-1 ಎರಡೂ ಚೆಕ್ ಬಂದಿಗಳು ಒಂದೇ ಎಂದರೆ ಸರಿ. ಅದ್ದರಿಂದ ನಮ್ಮ ಹೆಸರಿಗೆ ಪ್ರಸ್ತುತ ಕೇವಲ 2 ಎಕರೆ ಜಮೀನು ಮಾತ್ರ ಖಾತೆ ಇರಬೇಕು ಎಂದರೆ ಸರಿ. ಆದರೆ ನಮ್ಮ ಹೆಸರಿನಲ್ಲಿ ಹೆಚ್ಚುವರಿಯಾಗಿ 1 ಎಕರೆ ಸರಿಸಿ ಒಟ್ಟು 3 ಎಕರೆ ಖಾತೆ ಇದೆ ಎಂದರೆ ಸರಿಯಲ್ಲ.

**5**. ಹೆಚ್ಚುವರಿ ಖಾತೆಯ ಆಧಾರದ ಮೇಲೆ ನಾವು ವಾದಿಗಳಿಗೆ ತೊಂದರೆಯನ್ನು ಕೊಡುತ್ತಿದ್ದೇವೆ ಎಂದರೆ ಸರಿ. ಖಾತೆಯನ್ನು ನಮ್ಮ ಹೆಸರಿಗೆ ಮಾಡಿಸಿಕೊಳ್ಳುವ ಸಮಯದಲ್ಲಿ ಜಮೀನನ್ನು ನಾವು ಅಳತೆ ಮಾಡಿಸಿರುವುದಿಲ್ಲ. ಸರ್ವೇ ನಂಬರ 63 ಮತ್ತು 64 ರಲ್ಲಿ 18 ½, 9, 12 ಮತ್ತು 1 ಎಕರೆ ನಮಗೆ ಸೇರಿದ ಜಮೀನು ಇರುತ್ತದೆ. ಸರ್ವೇ ನಂಬರ 62 ರಲ್ಲಿ ನಮಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ.

**6**. ಹಾರಂಗಿ ನಾಲೆಗೆ ಹೋಗಿರುವ ಜಮೀನನ್ನು ಖಾತೆಯಿಂದ ತೆಗೆದಿರುತ್ತಾರೋ ಇಲ್ಲಮೋ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಹೆಸರು ವಾದಿಯ ಹೆಸರು ಎರಡು ಒಂದೇ ಆದ ಕಾರಣ ಮೋಸದಿಂದ 1 ಎಕರೆಯನ್ನು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಖಾಂತರ ಜಮೀನನ್ನು ಅಳತೆ ಮಾಡಿಸಿ ಒಂದು ವೇಳೆ ಹೆಚ್ಚುವರಿಯಾಗಿ ಜಮೀನು ಇದ್ದರೆ ಅದನ್ನು ತೆಗೆದುಕೊಳ್ಳಲು ನಮ್ಮದು ತಕರಾರು ಇರುವುದಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ